## ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ರವರು
## ಶೂನ್ಯವೇಳೆರಡಿ ನೀಡಿರುವ ಸೂಚನೆಗೆ ಉತ್ತರ

ಪ್ರಶ್ನೆ : ದಿನಾಂಕ: 30.11.2023ರಂದು ಚಿಕ್ಕಮಗಳೂರು ನಗರದಲ್ಲಿ ವಕೀಲನ ಮೇಲೆ ಪೊಲೀಸರು ಹಲ್ಲೆ ನಡೆಸಿರುವುದು ಖಂಡನೀಯ ಹಾಗೂ ಅಮಾನವೀಯ ಘಟನೆಯಾಗಿದ್ದು, ಇದು ದುರಾದೃಷ್ಟಕರ ಸಂಗತಿಯಾಗಿದೆ. ಪೊಲೀಸರು ಜನಸ್ನೇಹಿಯಾಗಿ ಕಾರ್ಯನಿರ್ವಹಿಸಬೇಕು. ಅದನ್ನು ಮೀರಿ ಅಮಾನುಷವಾಗಿ ವರ್ತಿಸುವುದು ಕಾನೂನು ಬಾಹಿರವಾಗಿರುತ್ತದೆ. ಸಣ್ಣ ಕಾರಣಕ್ಕೆ ಅಮಾನುಷವಾಗಿ ಥಳಿಸಿರುವುದು ಖಂಡನೀಯವಾಗಿದೆ. ಜನ ಸಾಮಾನ್ಯರಿಗೆ ಪೊಲೀಸ್ ಇಲಾಖೆ ಮೇಲೆ ನಂಬಿಕೆ ಇದೆ. ಏನೇ ಸಮಸ್ಯೆ ಬಂದರೂ ಅವರು ಪೊಲೀಸರ ಮೊರೆ ಹೋಗುತ್ತಾರೆ. ಹೀಗಿರುವಾಗ ಪೊಲೀಸರೇ ದೌರ್ಜನ್ಯ ನಡೆಸಿರುವುದು ಸರಿಯಾದ ಕ್ರಮವಲ್ಲ. ನ್ಯಾಯ ಒದಗಿಸುವ ವಕೀಲರ ವಿರುದ್ಧ ಈ ರೀತಿ ಕಾನೂನು ಬಾಹಿರ ತೆಗೆದುಕೊಂಡಲ್ಲಿ ಜನಸಾಮಾನ್ಯರ ಗತಿ ಏನು ಎಂಬುದು ಇಲ್ಲಿ ಪ್ರಶ್ನೆಯಾಗಿದೆ. ಈ ರೀತಿ ಅಮಾನವೀಯ ಘಟನೆಯಿಂದ ವಕೀಲ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಜನ ಸಾಮಾನ್ಯರಲ್ಲಿಯೂ ಸಹ ಅಭದ್ರತೆ ಉಂಟಾಗಿ ಶಾಂತಿ ಸೌಹಾರ್ದತೆಗೆ ಧಕ್ಕೆ ಉಂಟಾಗಿರುವುದು ನಿಜಕ್ಕೂ ಬೇಸರದ ಸಂಗತಿ ಹಾಗೂ ಇದು ಭವಿಷ್ಯಕ್ಕೆ ಉತ್ತಮ ಸಂದೇಶವಲ್ಲ. ಮುಂದೆ ಈ ರೀತಿ ಆಗದಂತೆ ಗೃಹ ಇಲಾಖೆಯು ಎಚ್ಚರವಹಿಸಬೇಕು ಹಾಗೂ ಈ ರೀತಿ ವಕೀಲರ ವಿರುದ್ಧ ಕಾನೂನು ಬಾಹಿರವಾಗಿ ನಡೆದುಕೊಂಡ ಪೊಲೀಸರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು ಅವಶ್ಯವಾಗಿರುವ ಕುರಿತು.

**ಉತ್ತರ:** ದಿನಾಂಕ: 30/11/2023 ರಂದು ಸುಮಾರು 19.00 ಗಂಟೆಗೆ ಪಿಎಸ್ಐ ತನಿಖೆ-2 ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಪಿ.ಎಸ್.ಐ. ರವರಾದ ಮಹೇಶ್ ಪೂಜೇರಿ ರವರು ಮಾರ್ಕೆಟ್ ರಸ್ತೆಯಲ್ಲಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ದಂಡ ವಿಧಿಸುತ್ತಿದ್ದಾಗ, ಕೆಎ 18 ಇಡಿ 2182 ದ್ವಿಚಕ್ರ ವಾಹನದಲ್ಲಿ ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸುತ್ತಿದ್ದ ವಕೀಲರಾದ ಶ್ರೀ ಪ್ರೀತಮ್.ಎನ್.ಟಿ. ರವರ ವಾಹನವನ್ನು ನಿಲ್ಲಿಸಿ, ಪಿಎಸ್ಐ ರವರು ಪ್ರಶ್ನಿಸಿದಾಗ ಅವರುಗಳ ನಡುವೆ ಮಾತಿನ ಚಕಮಕಿ ನಡೆದಿದ್ದು, ಪಿಎಸ್ಐ ರವರು ದ್ವಿಚಕ್ರ ವಾಹನವನ್ನು ಪೊಲೀಸ್ ಠಾಣೆಯ ಆವರಣದೊಳಗೆ ತೆಗೆದುಕೊಂಡು ಹೋಗಿ ಪ್ರೀತಮ್.ಎನ್.ಟಿ. ರವರನ್ನು ಪೊಲೀಸ್ ಠಾಣೆಯೊಳಗೆ ಬರಲು ತಿಳಿಸಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ವಕೀಲ ಪ್ರೀತಮ್.ಎನ್.ಟಿ. ರವರನ್ನು ಪಿ.ಎಸ್.ಐ. ಮಹೇಶ್ ಪೂಜೇರಿ ಮತ್ತು ಸಿಬ್ಬಂದಿಗಳಾದ 1) ರಾಮಪ್ಪ, ಎ.ಎಸ್.ಐ., 2) ಶಶಿಧರ, ಸಿ.ಹೆಚ್.ಸಿ.-324, 3) ಗುರುಪ್ರಸಾದ್, ಸಿ.ಪಿ.ಸಿ.-202, 4) ನಿಖಿಲ್ ಬಿ.ಕೆ, ಸಿ.ಪಿ.ಸಿ.-190 ಮತ್ತು 5) ಯುವರಾಜ ವಿ.ಟಿ, ಸಿ.ಪಿ.ಸಿ.-08 ರವರುಗಳು ಹಾಕಿ ಸ್ಟಿಕ್, ಲಾಠಿ ಮತ್ತು ಪೈಪ್ ನಿಂದ ಹಲ್ಲೆ ಮಾಡಿ, ಕುತ್ತಿಗೆ ಹಿಚುಕಿರುವ ಬಗ್ಗೆ ಆರೋಪಿಸಲಾಗಿರುತ್ತದೆ.

- ಪ್ರೀತಮ್.ಎನ್.ಟಿ. ಬಿನ್ ತಮ್ಮಣ್ಣಗೌಡ, 26 ವರ್ಷ ರವರ ಮೇಲೆ ಹಲ್ಲೆ ನಡೆದಿರುವ ಕುರಿತು, ಜಿಲ್ಲಾ ಸರ್ಕಾರಿ ಎಂ.ಜಿ. ಆಸ್ಪತ್ರೆಯಿಂದ ಕಳುಹಿಸಲಾದ ಎಂ.ಎಲ್.ಸಿ. ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ 30.11.2023 ರಂದು ರಾತ್ರಿ ಸುಮಾರು 21:35 ಗಂಟೆಗೆ ಸ್ವೀಕೃತವಾಗಿರುತ್ತದೆ.
- ಡಿ.ವೈ.ಎಸ್.ಪಿ. ಚಿಕ್ಕಮಗಳೂರು ಉಪವಿಭಾಗ ಮತ್ತು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಸಿಬ್ಬಂದಿಗಳು ಜಿಲ್ಲಾ ಸರ್ಕಾರಿ ಎಂ.ಜಿ. ಆಸ್ಪತ್ರೆಗೆ ಹೇಳಿಕೆ ಪಡೆಯಲು ಹೋದಾಗ ಗಾಯಾಳು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಸಿಬ್ಬಂದಿಗಳಿಗೆ ಹೇಳಿಕೆ ನೀಡಲು ನಿರಾಕರಿಸಿರುತ್ತಾರೆ. ಆದುದರಿಂದ ಬಸವನಹಳ್ಳಿ ಪೊಲೀಸ್ ಠಾಣೆಯ ಸಿ.ಹೆಚ್.ಸಿ-81 ಇಲಿಯಾಜ್ ರವರು ದಿನಾಂಕ 30/11/2023 ರಂದು 23:30 ಗಂಟೆಯಿಂದ ದಿನಾಂಕ 01/12/2023 ರಂದು 00:15 ಗಂಟೆಯವರೆಗೆ ಗಾಯಾಳುವಿನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆಯಲ್ಲಿ ಪ್ರೀತಮ್.ಎನ್.ಟಿ. ಬಿನ್ ತಮ್ಮಣ್ಣಗೌಡ, 26 ವರ್ಷ, ವಕೀಲ ವೃತ್ತಿ, ವಾಸ ಡಾ॥ ಶಿವಕುಮಾರ ಸ್ವಾಮೀಜಿ ರಸ್ತೆ, ಚಿಕ್ಕಮಗಳೂರು ರವರು ದಿನಾಂಕ 30/11/2023 ರಂದು 19:00 ಗಂಟೆಯ ಸಮಯದಲ್ಲಿ ಸದರಿಯವರು ಅವರ ಬಾಬ್ತು ಕೆಎ-18 ಇಡಿ-2182 ಮೋಟಾರ್ ಸೈಕಲ್ ನಲ್ಲಿ ಮಾರ್ಕೆಟ್ ರಸ್ತೆಯಲ್ಲಿ

ಹೋಗುತ್ತಿದ್ದಾಗ ಮಫ್ತಿಯಲ್ಲಿದ್ದ ವ್ಯಕ್ತಿಯೊಬ್ಬರು ಬಂದು ನನ್ನ ಬೈಕಿನ ಕೀಯನ್ನು ತೆಗೆದುಕೊಂಡು ಹೋಗಿದ್ದು, ನಾನು ಅದನ್ನು ಮೊಬೈಲ್ ನಲ್ಲಿ ವೀಡಿಯೋ ಮಾಡಿಕೊಂಡೆನು. ಅದಾದ ನಂತರ ನನ್ನನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಹೋದರು. ಆಗ ಅಲ್ಲಿ ಐದಾರು ಜನ ಪೊಲೀಸರು ನನ್ನನ್ನು ಪ್ರಶ್ನೆ ಮಾಡಿ, ನಂತರ ಪೊಲೀಸರಾದ ಗುರುಪ್ರಸಾದ್, ಶಶಿ ಮತ್ತು ಇತರರು ನನ್ನ ಬೆನ್ನಿಗೆ, ಎದೆಗೆ ಹಾಕಿ ಸ್ಟಿಕ್, ಲಾಠಿಯಿಂದ ಹಲ್ಲೆ ಮಾಡಿ, ಕೊಲೆ ಮಾಡುವ ಉದ್ದೇಶದಿಂದ ಕುತ್ತಿಗೆ ಹಿಚುಕಿರುತ್ತಾರೆ ಇತ್ಯಾದಿಯಾಗಿ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ಸದರಿಯವರು ವಕೀಲರಾದ ಸುಮಂತ್, ಶರತ್ ಮತ್ತು ಪ್ರದೀಪ್ ರವರೊಂದಿಗೆ ಆಸ್ಪತ್ರೆಗೆ ಹೋಗಿರುತ್ತಾರೆ. ಈ ಹೇಳಿಕೆಯನ್ವಯ ಚಿಕ್ಕಮಗಳೂರು ನಗರ ಪೊಲೀಸ್ ಠಾಣಾ ಮೊ. ನಂ. 215/2023 ಕಲಂ 506, 341, 307, 324, 326 ಸಹಿತ 149 ಐಪಿಸಿ ರೀತ್ಯಾ ಗುರುಪ್ರಸಾದ್, ಶಶಿ ಮತ್ತು ಇತರರ ವಿರುದ್ಧ ದಿನಾಂಕ 01/12/2023 ರಂದು 00.20 ಗಂಟೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಲಾಗಿದೆ.

- ಮೇಲ್ಕಂಡ ಘಟನೆಯ ಹಿನ್ನಲೆಯಲ್ಲಿ ವಕೀಲರು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಹತ್ತಿರ ಪ್ರತಿಭಟನೆ ಮಾಡಿದ ಹಿನ್ನಲೆಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿರುತ್ತದೆ.
- ದಿನಾಂಕ:30/11/2023 ರಂದು ಸುಮಾರು 19:00 ಗಂಟೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಪಿ.ಎಸ್.ಐ. ಮಹೇಶ್ ಪೂಜೇರಿ ರವರು ಚಿಕ್ಕಮಗಳೂರು ನಗರದ ಅಂಬೇಡ್ಕರ್ ರಸ್ತೆಯಲ್ಲಿ ಸಂಚಾರ ಉಲ್ಲಂಘನೆ ಪ್ರಕರಣ ದಾಖಲು ಮಾಡುವ ಸಂದರ್ಭದಲ್ಲಿ ಪ್ರೀತಮ್ ಎನ್.ಟಿ, ವಕೀಲರು, ಚಿಕ್ಕಮಗಳೂರು ಇವರು ಸಂಚಾರ ನಿಯಮ ಉಲ್ಲಂಘನೆ ಮಾಡಿರುತ್ತಾರೆ ಎಂಬ ಕಾರಣಕ್ಕೆ ವಾಗ್ವಾದ ಮಾಡಿಕೊಂಡು, ಸದರಿಯವರನ್ನು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಮಹೇಶ್ ಪೂಜೇರಿ, ಪಿ.ಎಸ್.ಐ. ತನಿಖೆ-2, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿಗಳಾದ 1) ರಾಮಪ್ಪ, ಎ.ಎಸ್.ಐ., 2) ಶಶಿಧರ, ಸಿ.ಹೆಚ್.ಸಿ.-324, 3) ಗುರುಪ್ರಸಾದ್, ಸಿ.ಪಿ.ಸಿ.-202, 4) ನಿಖಿಲ್ ಬಿ.ಕೆ, ಸಿ.ಪಿ.ಸಿ.-190 ಮತ್ತು 5) ಯುವರಾಜ ವಿ.ಟಿ, ಸಿ.ಪಿ.ಸಿ.-08 ರವರುಗಳು ಪ್ರೀತಮ್ ಎನ್. ಟಿ, ವಕೀಲರು ರವರಿಗೆ ದೈಹಿಕವಾಗಿ ಹಲ್ಲೆ ನಡೆಸಿ, ಅವಾಚ್ಯ ಶಬ್ಧಗಳಿಂದ ಬೈದು, ಲಾಠಿಯಿಂದ ಹೊಡೆದು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಸದರಿಯವರುಗಳನ್ನು ದಿನಾಂಕ: 01/12/2023 ರಂದು ಜಿಲ್ಲಾ ಪೊಲೀಸ್ ಕಛೇರಿ, ಚಿಕ್ಕಮಗಳೂರು ಆದೇಶ ಸಂಖ್ಯೆ. ಸಿಬ್ಬಂದಿ-2/189/2023, ಓ.ಬಿ. ನಂ. 434/2023 ರ ಅನ್ವಯ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.
- ಈ ಹಿನ್ನಲೆಯಲ್ಲಿ ದಿನಾಂಕ:30-11-2023 ರಂದು ರಾತ್ರಿ ಸುಮಾರು 11-30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ವಕೀಲರ ಬಾರ್ ಕೌನ್ಸಿಲ್ ಅಧ್ಯಕ್ಷರಾದ ಶ್ರೀ ಸುಧಾಕರ್‌ರವರ ನೇತೃತ್ವದಲ್ಲಿ ಸುಮಾರು 200 ಜನಕ್ಕು ಹೆಚ್ಚು ವಕೀಲರು ಏಕಾಏಕಿ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಬಂದು ಪೊಲೀಸ್ ವಿರುದ್ಧ ಮತ್ತು ಪೊಲೀಸ್ ಇಲಾಖೆಯ ವಿರುದ್ಧ ಘೋಷಣೆಗಳನ್ನು ಕೂಗಿ ಅವಾಚ್ಯ ಶಬ್ದಗಳಿಂದ ಬೈದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ದಾಂಧಲೆ ಮಾಡಿರುತ್ತಾರೆ. ಈ ಸಂಬಂಧ ಪೊಲೀಸ್ ಸಿಬ್ಬಂದಿಗೆ ಕಪಾಳ ಮೋಕ್ಷ ಮಾಡಿದ ಪ್ರೀತಮ್ ಹಾಗೂ ಠಾಣೆಗೆ ನುಗ್ಗಿ ದಾಂಧಲೆ ಮಾಡಿದ ವಕೀಲರುಗಳ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಮೊ.ನಂ.217/2023, ಕಲಂ-323, 504, 506, 353 ಐ.ಪಿ.ಸಿ., ಮತ್ತು ಮೊ.ನಂ.218/2023 ಕಲಂ 504, 506, 353, ಸಹಿತ 149 ಐ.ಪಿ.ಸಿ. ಮತ್ತು ಮೊ.ನಂ.219/2023 ಕಲಂ 504, 353 ಐ.ಪಿ.ಸಿ ಹಾಗೂ ಮೊ.ನಂ. 220/2023 ಕಲಂ. 504, 341, 353, ಸಹಿತ 149 ಐ.ಪಿ.ಸಿ. ರಲ್ಲಿ ಒಟ್ಟು 4 ಪ್ರಕರಣಗಳನ್ನು ದಾಖಲಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ.
- ಪ್ರಕರಣದ ತೀವ್ರತೆಯನ್ನು ಪರಿಗಣಿಸಿ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸುವಂತೆ ಪೊಲೀಸ್ ಉಪಾಧೀಕ್ಷಕರು, ಚಿಕ್ಕಮಗಳೂರು ಉಪ ವಿಭಾಗ ರವರಿಗೆ ಸೂಚಿಸಲಾಗಿರುತ್ತದೆ.
- ದಿನಾಂಕ:01-12-2023 ರಂದು ಚಿಕ್ಕಮಗಳೂರು ಜಿಲ್ಲಾ ಬಾರ್ ಕೌನ್ಸಿಲ್ ಅಧ್ಯಕ್ಷರಾದ ಶ್ರೀ ಸುಧಾಕರ್‌ರವರ ನೇತೃತ್ವದಲ್ಲಿ ಜಿಲ್ಲೆಯ ಸುಮಾರು 300-350 ಜನ ವಕೀಲರುಗಳು ನ್ಯಾಯಾಲಯಗಳ ಕಲಾಪಗಳನ್ನು ಬಹಿಷ್ಕರಿಸಿ ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ, ನ್ಯಾಯಾಲಯದಿಂದ ಪ್ರತಿಭಟನಾ ಮೆರವಣಿಗೆ ಹೊರಟು

ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿಕೊಂಡು ಜಿಲ್ಲಾ ಪೊಲೀಸ್ ಕಛೇರಿ-ಆಜಾದ್ ಪಾರ್ಕ್-ತೊಗರಿಹಂಕಲ್ ಸರ್ಕಲ್-ಐ.ಜಿ.ರಸ್ತೆಯಲ್ಲಿ ಸಾಗಿ ಹನುಮಂತಪ್ಪ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ಮಾಡಿ ನಂತರ ಅಲ್ಲಿಂದ ಅಂಬೇಡ್ಕರ್ ರಸ್ತೆಯಲ್ಲಿರುವ ನಗರ ಪೊಲೀಸ್ ಠಾಣೆಯ ಮುಂಭಾಗಕ್ಕೆ ಬಂದು ಅಲ್ಲಿಯೂ ಸಹ ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿ, ನಂತರ ಎಂ.ಜಿ ರಸ್ತೆ ಮುಖಾಂತರ ಆಜಾದ್ ಪಾರ್ಕ್‌ಗೆ ಬಂದು ಮಧ್ಯಾಹ್ನ ಸುಮಾರು 02.30 ಗಂಟೆಗೆ ಪ್ರತಿಭಟನೆಯನ್ನು ಮುಗಿಸಿರುತ್ತಾರೆ.

- ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಘನ ಉಚ್ಚ ನ್ಯಾಯಾಲಯವು ಪೊಲೀಸ್ ಠಾಣೆಯಲ್ಲಿ 6 ಜನ ಸಿಬ್ಬಂದಿಗಳು ಸೇರಿ ಓರ್ವ ವಕೀಲರ ಮೇಲೆ ಹಲ್ಲೆ ಮಾಡಿರುವ ವಿಷಯದ ಬಗ್ಗೆ ಸ್ವಯಂ ಪ್ರೇರಿತವಾಗಿ ದಾಖಲು ಮಾಡಿದ ರಿಟ್ ಅರ್ಜಿಯಲ್ಲಿ ದಿನಾಂಕ 01/12/2023 ರಂದು ಮಧ್ಯಾಹ್ನ 2.30 ಗಂಟೆಗೆ ನಡೆಸಿದ ವಿಚಾರಣೆಯಲ್ಲಿ ಪ್ರಕರಣದ ಎಲ್ಲಾ ತನಿಖಾ ಹಂತಗಳನ್ನು ಪೂರ್ಣಗೊಳಿಸಿ ದಿನಾಂಕ 05/12/2023 ರಂದು ಘನ ನ್ಯಾಯಾಲಯಕ್ಕೆ ಪ್ರಗತಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ಪ್ರಕರಣದ ಎಲ್ಲಾ ತನಿಖಾ ಹಂತಗಳನ್ನು ಪೂರ್ಣಗೊಳಿಸಿ ಘನ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಲಾಗುವುದು.
- ಈ ಸಂಬಂಧ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿರುತ್ತದೆ.
- ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಪ್ರಸ್ತುತ ಕಾನೂನು ಮತ್ತು ಸುವ್ಯವಸ್ಥೆಯು ಸುಸ್ಥಿತಿಯಲ್ಲಿರುತ್ತದೆ.

---

**ಹೆಚ್‌ಡಿ 141 ಪಿಇಐ 2023**

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು

Scanned with CamScanner